ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue- 1, Sep-Oct, 2023, Pp. 33-37.
©IIMRD, Mysuru.

IIMRD JOURNALS
www.iimrd.com

# ಹರಿಹರನ ರಗಳೆಗಳಲ್ಲಿ ಭಕ್ತಿ ಪ್ರವೃತ್ತಿ

**ಡಾ. ಎ. ಜಯಲಕ್ಷ್ಮಿ***
*ಪ್ರಾಧ್ಯಾಪಕರು, ಕ್ರೈಸ್ಟ್ ಕಾಲೇಜು, ಆಲಂಬಾಡಿ, ಮಾಲೂರು ತಾ. ಕೋಲಾರ ಜಿಲ್ಲೆ.

***ಸಾರಾಂಶ: (Abstract)***
*ಹರಿಹರ ಭಕ್ತಾಗ್ರೇಸರನಾದ ಕವಿ. ಅವನು ಭಕ್ತಿಯಲ್ಲಿ ತೊಡಗಿದನೆಂದರೆ ಲೋಕವನ್ನೇ ಮರೆಯುವಂಥವನು. ಅವನ ಭಕ್ತಿಗೂ ಪ್ರಾಚೀನರ ಭಕ್ತಿಗೂ ಅಜಗಜಾಂತರ ವ್ಯತ್ಯಾಸವಿದೆ. ಅವನ ಭಕ್ತಿ ಪ್ರಾಚೀನರ ಭಕ್ತಿಯಂತೆ ಕ್ಲಿಷ್ಟವಾದದ್ದು. ಜಾತಿ ಮತ ಧರ್ಮಗಳನ್ನು ಆಧರಿಸಿದ್ದರೂ ಆಡಂಬರವಾದಕ್ಕೂ ಅಲ್ಲ. ಹರಿಹರನ ಭಕ್ತಿ ಅತ್ಯಂತ ಸರಳವಾಗಿದ್ದು ಸಾಮಾನ್ಯರೂ ಅನುಸರಿಸಲು ಯೋಗ್ಯವಾಗಿರುವಂಥದ್ದು. ಜಾತಿ ಮತ ಧರ್ಮಗಳಿಂದ ದೂರವಿದ್ದು ಸರ್ವ ಸಮಾನತೆಯುಳ್ಳದ್ದು ಹಾಗೂ ವೀರಶೈವ ತತ್ವಾಚರಣೆಯುಳ್ಳದ್ದೂ ಆಗಿದೆ. ಈ ಲೇಖನದಲ್ಲಿ ಹರಿಹರನ ರಗಳೆಗಳಲ್ಲಿ ವ್ಯಕ್ತವಾಗಿರುವ ಭಕ್ತಿ ಪ್ರವೃತ್ತಿ ಕುರಿತು ವಿವರಿಸಲಾಗಿದೆ.*

***ಮುಖ್ಯಪದಗಳು (Keywords)*** *ಹರಿಹರ, ರಗಳೆಗಳು, ಶರಣರು, ಭಕ್ತಿ ಪ್ರವೃತ್ತಿ, ಜಂಗಮರು.*

**ಪೀಠಿಕೆ**

ಹರಿಹರನ ಭಕ್ತಿ ಅತೀ ಸರಳವಾದದ್ದು, ಅಲ್ಲಿ ಯಾವ ವಿಧಿವಿಧಾನಗಳೂ ಇಲ್ಲ, ಭಕ್ತಿ ಹೀಗೆ ಇರಬೇಕು, ಇಂಥದೇ ಸ್ಥಳ ಆಗಿರಬೇಕು, ಇದೇ ದೇವರನ್ನು ಪೂಜಿಸಬೇಕು ಎಂಬ ಕಟ್ಟುನಿಟ್ಟುಗಳಿಲ್ಲ. ಇಲ್ಲಿ ಮುಖ್ಯವಾದದ್ದು ಭಕ್ತನ ಅಂತರಂಗ, ಅಂತೆಯೇ ಭಕ್ತರ ಪೂಜೆ ಅನೇಕ ವಿಧವಾಗಿರುತ್ತದೆ. ಕೋಳೂರ ಕೊಡಗೂಸಿನ ಪೂಜೆ ಒಂದು ತೆರನಾಗಿದ್ದರೆ, ಕಾರಿಕಾಲಮ್ಮೆಯ ಪೂಜೆ ಇನ್ನೊಂದು ತೆರನಾಗಿರುತ್ತದೆ. ಬಸವಣ್ಣನ ಪೂಜೆ ಒಂದು ತೆರನಾಗಿದ್ದರೆ, ನಂಬಿಯಣ್ಣನ ಪೂಜೆ ಇನ್ನೊಂದು ತೆರನಾಗಿರುತ್ತದೆ. ಭಕ್ತ ಇಳೆಯಾಂಡ ಗುಡಿಮಾರ ತನ್ನ ತನು, ಮನ, ಧನಗಳನ್ನೇ ಶಿವನಿಗೆ ಅರ್ಪಿಸಿದರೆ ತೆಲುಗು ಜೊಮ್ಮಯ ಮತ್ತು ಕಣ್ಣಪ್ಪನಂತಹವರು ಮಾಂಸವನ್ನೇ ಶಿವನಿಗೆ ಅರ್ಪಿಸುತ್ತಾರೆ, ಯಾವ ಭಕ್ತ ಕೂಡ ತನ್ನ ಪೂಜೆಗೆ ಇದೇ ಸ್ಥಳ ಆಗಿರಬೇಕು ಎಂದುಕೊಂಡಿಲ್ಲ. ಮಾದಾರ ಚೆನ್ನಯ್ಯ ಕುದುರೆಗೆ ಹುಲ್ಲು ತರಲು ಹೋದಾಗ ಅಲ್ಲೇ ಭಕ್ತಿ ನಿರತನಾಗುತ್ತಾನೆ. ಇಳೆಯಾಂಡ ಗುಡಿಮಾರ ಒಕ್ಕಲುತನವನ್ನೇ ಶಿವಾರ್ಷಿಕವೆಂದುಕೊಳ್ಳುತ್ತಾನೆ. ಆತಿಭಕ್ತ ಮೀನು ಹಿಡಿಯುತ್ತಲೇ ಭಕ್ತಿ ನಿರತನಾಗುತ್ತಾನೆ. ಕಾರಿಕಾಲಮ್ಮೆ ಗಂಡನ ಮನೆಯಲ್ಲಿ ಭಕ್ತಿ ನಿರತಳಾಗುತ್ತಾಳೆ, ಹೇರೂರ ಹಂಗೂಸು ಕಾಡಿನ ನಡುವೆಯೇ ಶಿವನನ್ನು ಕಾಣುತ್ತಾಳೆ. ಹೀಗೆ ಸ್ಥಾವರ ಪೂಜೆ, ಇಷ್ಟಲಿಂಗಪೂಜೆ ಎರಡೂ ಹರಿಹರನ ಭಕ್ತರ ಅನುಸರಣೆಯಲ್ಲಿವೆ. ಇವರ ಭಕ್ತಿಯಲ್ಲಿ ಯಾವ ಆಡಂಬರವೂ ಇಲ್ಲ. ಸಾಮಾನ್ಯರಿಂದ ಶ್ರೀಮಂತರವರೆಗೆ ಎಲ್ಲರಿಗೂ ಭಕ್ತನಾಗುವ ಸುಯೋಗವಿದೆ.

*Please cite this article as:* ಡಾ.ಎ.ಜಯಲಕ್ಷ್ಮಿ. (2023). ಹರಿಹರನ ರಗಳೆಗಳಲ್ಲಿ ಭಕ್ತಿ ಪ್ರವೃತ್ತಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.33–37.*

ಬಸವಣ್ಣ, ನಂಬಿಯಣ್ಣ, ಕರಿಕಾಳಚೋಳ, ಪೆರಾಡಿರಾಯರಂಥ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಸಾಮಾನ್ಯರೇ ಆಗಿದ್ದಾರೆ. ಈ ಭಕ್ತರೆಲ್ಲ ಸಾಮಾನ್ಯರಾಗಿರುವುದರ ಜೊತೆಗೆ ಬೇರೆ ಬೇರೆ ಜಾತಿ, ಧರ್ಮ ಮತ್ತು ಊರುಗಳಿಂದ ಬಂದವರಾಗಿದ್ದಾರೆ. ಇವರಲ್ಲಿ ಬಸವಣ್ಣ ಸಾಮವೇದಿಗಳಂಥ ಬ್ರಾಹ್ಮಣ ವರ್ಗದವರು, ಶ್ವಪಚಯ್ಯ, ಮಾದಾರಚೆನ್ನಯ್ಯರಂಥ ಅಸ್ಪೃಶ್ಯರು, ಗುಂಡಮ್ಮನಂಥ ಕುಂಬಾರರು, ಪದ್ಮಾವತಿ ಮತ್ತು ಪಾರಿಷ ಪಂಡಿತರಂಥ ಜೈನರು, ಇಳೆಯಾಂಡ ಗುಡಿಮಾರನಂಥ ಒಕ್ಕಲಿಗರು ಸೇರಿದ್ದಾರೆ. ಹಾಗೆಯೇ ವಿವಿಧ ವೃತ್ತಿಯಿಂದ ಬಂದ ಭಕ್ತರಾದ ಅರಿವಾಳ್ತಂಡ, ತಿರುಕುರುಂಪೆತೊಂಡ, ಆನಾಯನಾರರಂಥ ಭಕ್ತರೂ ಇದ್ದಾರೆ. ಎಲ್ಲ ಭಕ್ತರೂ ಸಮಾನ ಮನಸ್ಥಿತಿಯುಳ್ಳವರು, ಸ್ತ್ರೀ–ಪುರುಷ ಎಂಬ ಭಿನ್ನ ಭಾವ ಅವರಲ್ಲಿ ಕಂಡು ಬರುವುದಿಲ್ಲ. ಪುರುಷರಿಗೆ ಎಷ್ಟು ಗೌರವವಿದೆಯೋ ಅಷ್ಟೇ ಗೌರವ ಸ್ತ್ರೀಯರಿಗೂ ಇದೆ. ಈ ಎಲ್ಲವುಗಳ ಜೊತೆಗೆ ಹರಿಹರನ ಭಕ್ತಿಯಲ್ಲಿ ಮಹತ್ವವಾಗಿ ಕಂಡುಬರುವುದು ವೀರಶೈವ ಆಚರಣೆ.

"ವೀರಶೈವ ಶರಣರಲ್ಲಿ ಕಾಣುವ ಭಕ್ತಿ ಅಂತರಂಗ–ಬಹಿರಂಗಗಳಲ್ಲಿ ಸಮಾನವಾದುದು. ಭಕ್ತನ ಬಹಿರಂಗ ಕ್ರಿಯೆ ಅಂತರಂಗದ ಚಿತ್ತವೃತ್ತಿಯಲ್ಲಿ ಬೆರಸಿ ಬೇರಿಲ್ಲದಾಗಬೇಕೆಂಬ ಸಾವಯವ ತತ್ವ" ರಗಳೆಗಳಲ್ಲಿ ವ್ಯಕ್ತವಾಗುತ್ತದೆ. ಉದಾಹರಣೆಗೆ:

***"ಸಮಚಿತ್ರವೆಂಬ ಭೂಮಿಯನ ಹಸನಾಗಿರಿಸಿ***

***ಅಮರ್ದಶಂಕರನೆಂಬ ನೇಗಿಲನಿರಿಸಿ."[1] (ಇ.ಗು.ರ)***

***"ಪಾಪವೆಂಬ ಮಲಿನ ಮನದ ಸೀರೆಯಂ ತೆರಳ್ಚಿ ಕಟ್ಟಿ***

***ಕೋಪವೆಂಬ ಕತ್ತೆ ನಿಲಲು ಬೆನ್ನ ಮೇಲೆ ಮಾಣದೊಟ್ಟ"[2] (ತಿ.ನೀ.ರ)***

ಇಳೆಯಾಂಡ ಗುಡಿಮಾರ ಮತ್ತು ತಿರುಕುರುಂಪೆತೊಂಡರ ರಗಳೆಗಳಲ್ಲಿ ಬರುವ ಈ ಚಿತ್ರಗಳನ್ನು ನೋಡಬಹುದು.

ಸೃಷ್ಟಿಯಲ್ಲೇ ಶಿವನ ದೃಷ್ಟಿಯನ್ನು ಕಾಣುವಂಥದ್ದು ವೀರಶೈವ ಧರ್ಮದ ಇನ್ನೊಂದು ತತ್ವ. ಈ ದೃಷ್ಟಿ ಮಾದಾರ ಚೆನ್ನಯ್ಯನ ಅನುಭೂತಿಯಲ್ಲಿ ಹೊರಹೊಮ್ಮಿದೆ. ಚೆನ್ನಯ್ಯ ಬೆಳಗಿನ ಜಾವದಲ್ಲಿ ಕಾನನಕ್ಕೆ ಹುಲ್ಲು ಕೊಯ್ಯಲು ಹೋಗುವಾಗ, ಪ್ರಕೃತಿಯ ಒಂದೊಂದು ವಸ್ತುವಿನಲ್ಲಿ ಮತ್ತು ಅದರ ಚೆಲುವಿನಲ್ಲಿ ಶಿವಸೌಂದರ್ಯ ಕಂಗೊಳಿಸುತ್ತದೆ. ಆಗ ಚೆನ್ನಯ್ಯ ಆ ಸೌಂದರ್ಯವನ್ನು ಶಿವನಿಗೆ ಅರ್ಪಿಸುತ್ತಾನೆ. ಷಟ್‌ಸ್ಥಲ ತತ್ವದ ಪ್ರಕಾರ ಇದು ಲಿಂಗಾಂಗ ಸಾಮರಸ್ಯದ ಒಂದು ಮಹೋನ್ನತ ಘಟ್ಟ. ಹಾಗೆಯೇ ವೀರಶೈವ ಧರ್ಮದಲ್ಲಿ ಬರುವ ಅಂತರಂಗದ ಅನುಭಾವ, ಉಪಾಸನಾ ಮಾರ್ಗ, ಸಮರ್ಪಣ ಭಾವ, ಟೀಕಾಸಂಸ್ಕಾರ, ಗುರುಲಿಂಗ ಜಂಗಮಾರಾಧನೆ, ಮರ್ತ್ಯಲೋಕ–ಶಿವಲೋಕ ಇವು ಕಂಡುಬರುತ್ತವೆ. ರಗಳೆಯಲ್ಲಿ ಇವುಗಳ ಇರುವಿಕೆಯನ್ನು ಗುರುತಿಸಬಹುದು.

ಅಂತರಂಗದ ಅನುಭಾವ: "ಮಾಡುವ ಭಕ್ತಂಗೆ ಮನವ ಸಾಕ್ಷಿ ಎನ್ನುತ್ತದೆ ಶರಣ ಧರ್ಮ. ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲಾಗುತ್ತದೆ. ಲೋಕ ಮೆಚ್ಚಲೆಂದು ಕೀರ್ತಿ ವಾರ್ತೆಗೆ ಮಾಡುವ ಭಕ್ತಿ ಭಕ್ತನನ್ನು ಹಗುರಾಗಿಸುತ್ತದೆ"[3] ಭಕ್ತಿಯೆಂದರೆ ಸಂತೆಯಲ್ಲಿ ಸಿಗುವ ಸರಕಲ್ಲ, ಅದು ಅಂತರಂಗದ ಅನುಭಾವ. ಈ ಅಂತರಂಗದ ಅನುಭಾವ ಹರಿಹರನ ಭಕ್ತರನೇಕರಲ್ಲಿ ಕಂಡುಬರುತ್ತದೆ.

*“ಆಳಿಗೊಳಗಾಯಿತೆನ್ನಯ ಭಕ್ತಿ ಧರೆಗೆಂದು*
*ಹರಲೆಯೊಳ್ತಂದಿಕ್ಕಿತೆನ್ನೆ ಡಂಬಿನ ಭಕ್ತಿ*

*..........................................................*

*ಅಚ್ಚಿಗಂಗೊಳಿಸಿ ತಡ ಪಡಿಸಿತೆನ್ನಯ ಭಕ್ತಿ”*[4]

ಎಂಬುದು ತಿರುನೀಲಕಂಠನ ಭಕ್ತಿಯ ಅವಸ್ಥೆಯಾಗಿದೆ. ಇಲ್ಲಿ ತಿರುನೀಲಕಂಠನ ಅಂತರಂಗದ ನಿರೀಕ್ಷಣೆ ಹಾಗೂ ಹೃದಯದ ಅನುತಾಪ ವ್ಯಕ್ತವಾಗುತ್ತದೆ. ಮಾದಾರ ಚೆನ್ನಯ್ಯನ ರಗಳೆಯಲ್ಲೂ ಇಂಥ ಅಂತರಂಗದ ಭಕ್ತಿ ಗೋಚರವಾಗುತ್ತದೆ. ಉಪಾಸನಾ ಮಾರ್ಗ: ಭಕ್ತನಾದವನು ವೇದಾಗಮ ಪುರಾಣಗಳನ್ನೆಲ್ಲ ಬಲ್ಲವನಾಗಿರಲಿ ಅಥವಾ ನಿರಕ್ಷರ ಕುಕ್ಷಿಯಾಗಿರಲಿ ಅವನ ಭಕ್ತಿಯಲ್ಲಿ ಉಪಾಸನೆಯ ಮಾರ್ಗವಿದ್ದು ನೈಜವೂ ನಿರಾಡಂಬರವೂ ಆಗಿರಬೇಕು. ಅಂಥ ಭಕ್ತಿ ಮಾತ್ರ ಶಿವನ ಮೆಚ್ಚುಗೆಗೆ ಪಾತ್ರವಾಗುತ್ತದೆ. ಕಣ್ಣಪ್ಪ, ಕಾರಿಕಾಲಮ್ಮ, ಬಸವಣ್ಣ ಮುಂತಾದ ಭಕ್ತರೆಲ್ಲ ಇದೇ ಮಾರ್ಗದವರಾಗಿದ್ದಾರೆ.

ಸಮರ್ಪಣ ಭಾವ: ಭಕ್ತ ಎಂಥ ಮಹಿಮನೇ ಆಗಿರಲಿ ಅವನಲ್ಲಿ ಸರ್ವಸಮರ್ಪಣ ಭಾವ ಇರಬೇಕು. ಈ ಸರ್ವಸಮರ್ಪಣ ಇಲ್ಲದ ಭಕ್ತಿ ಶಿವನಿಗೆ ಮೆಚ್ಚುಗೆಯಾಗದು. ಇದು ಹರಿಹರನ ರಗಳೆಯಲ್ಲಿ ಬರುವ ಎಲ್ಲ ಭಕ್ತರಲ್ಲೂ ಕಂಡುಬರುತ್ತದೆ. ಸರ್ವಸಮರ್ಪಣೆಯಿಲ್ಲದಿದ್ದರೆ ಶಿವನೊಲಿಯುವುದಿಲ್ಲ ಎಂಬುದಕ್ಕೆ ಓಹಿಲಯ್ಯ ಉತ್ತಮ ಉದಾಹರಣೆ. ಈತ ಆರಂಭದಲ್ಲಿ ತಾನು ಮಾಡಬೇಕಾದ ಭಕ್ತಿಗೆ ಬೇರೊಬ್ಬರ ಸಹಾಯ ಪಡೆದುಕೊಂಡಿರುತ್ತಾನೆ. ಹಾಗಾಗಿ ಆತನಿಗೆ ಶಿವನೊಲಿಯುವುದಿಲ್ಲ. ಆದರೆ ಎರಡನೆ ಬಾರಿ ತಾನೇ ಗುಗ್ಗುಳ ಸೇವೆಯಲ್ಲಿ ನಿರತನಾಗುತ್ತಾನೆ. ಆಗ ಶಿವ ಕರುಣಿಸುತ್ತಾನೆ. ದೀಕ್ಷಾ ಸಂಸ್ಕಾರ: ದೀಕ್ಷೆ ವೀರಶೈವ ಧರ್ಮದ ಒಂದು ಅಂಗ. ಹಾಗಾಗಿ ಆ ಧರ್ಮದ ಶರಣರಲ್ಲ ದೀಕ್ಷಿತರೇ ಆಗಿದ್ದಾರೆ, ಉದಾ:

*ಇಳುಪಿದಂತಾಯ್ತು ಶಿವಲಿಂಗಂ ನಿರೀಕ್ಷಣದ ನೋಟದಿಂದಂಗಯ್ಯಲಿಕ್ಕಿದಂ ಲಿಂಗಮಂ 5.*

ಪ್ರಭುದೇವರ ರಗಳೆಯಲ್ಲಿ ಬರುವ ಈ ಮಾತು ಪ್ರಯದೇವರಿಗೆ ಲಿಂಗದೀಕ್ಷೆಯಾದುದನ್ನು ತಿಳಿಸುತ್ತದೆ. ಬಸವರಾಜದೇವರ ರಗಳೆಯಲ್ಲಿ ಬಸವಣ್ಣನಿಗೆ ಲಿಂಗದೀಕ್ಷೆಯಾದುದನ್ನು **“**ವೃಷಭರಾಜಂ ವತಿಯನುಜ್ಞೆಯೊಡನೆ ಬಸವಣ್ಣನ ಹಸ್ತದೊಳು ಸಂಗಮೇಶ್ವರ ಲಿಂಗಮಂ ಭೋಂಕನೆ ಬಿಜಯಂಗೆಯ್ಸಿ**”**[6] ಎಂಬ ಮಾತು ತಿಳಿಸುತ್ತದೆ. ಹಾವಿನಹಾಳ ಕಲ್ಲಯ್ಯನಿಗೆ ರುದ್ರಮುನಿ ಲಿಂಗದೀಕ್ಷೆ ಮಾಡುವ ಪ್ರಸಂಗವನ್ನು ಹರಿಹರ ಶಾಸ್ತ್ರೋಕ್ತವಾಗಿ ವರ್ಣಿಸುತ್ತಾನೆ.

ಗುರು–ಲಿಂಗ–ಜಂಗಮಾರಾಧನೆ: ಗುರು–ಲಿಂಗ–ಜಂಗಮ, ಇವು ಭಿನ್ನಭಿನ್ನವಲ್ಲ, ಈ ಮೂರನ್ನೂ ವೀರಶೈವ ಧರ್ಮ ಸಮನ್ವಯ ಭಾವದಿಂದ ಕಂಡಿದೆ. ಇದನ್ನು ಕೆಂಭಾವಿ ಭೋಗಣ್ಣನ ರಗಳೆಯಲ್ಲಿ ಬರುವ;

**“**ಜಂಗಮವು ಲಿಂಗಕ್ಕೆ ಲಿಂಗವಾಜಂಗಮಕೆ

*ಲಿಂಗ ಜಂಗಮವೆಂಬವವಿಭೇದವೀ ಜಗಕೆ”*[7]

ಈ ವಾಕ್ಯಗಳಲ್ಲಿ ಗುರುತಿಸಬಹುದು. ಬಸವರಾಜದೇವರ ರಗಳೆಯಲ್ಲಿ ಕೂಡ ಈ ಭಾವವನ್ನು ಕಾಣಬಹುದು. ಅಲ್ಲಿ ಬಸವರಾಜನು ವೀರಶೈವ ಆಚರಣೆಗಳಲ್ಲಿ ನಿಸ್ಸಿಮ್ ಎಂಬುದನ್ನು ಹರಿಹರ ಬಿತ್ತರಿಸಿದ ರೀತಿ ಅನುಪಮವಾಗಿದೆ. ರಗಳೆಯಲ್ಲಿ ಬರುವ **“**ಶರಣಂ ಸಂಗನೆಂದಲ್ಲದ ಕಾಣೆ, ಜಂಗಮ ಪ್ರಾಣಿಯಾಗಿಪ್ಪ,

ಶಿವಲಿಂಗಾರ್ಪಿತವಲ್ಲದುದನಾಘ್ರಾಣಿಸ, ಲಿಂಗದಲ್ಲಿ ಕಠಿಣಮಂ ಕೇಳೆ, ಜಂಗಮದಲ್ಲಿ ಜಾತಿಯನರಸ, ಪ್ರಸಾದದಲ್ಲಿ ಅಪವಿತ್ರತೆಯನರಿಯೆ"[8] ಎಂಬ ವಿಚಾರ ವೀರಶೈವ ಧರ್ಮದ ಸಾಧಕನ ಆಚಾರ–ವಿಚಾರಗಳ ಕೈಪಿಡಿಯಂತ ಇವೆ.

ಮರ್ತ್ಯಲೋಕ–ಶಿವಲೋಕ: ನೂತನ ಶರಣರು ಅಂಗವೇ ಲಿಂಗ, ಲಿಂಗವೇ ಪ್ರಾಣವೆಂದು ಭಾವಿಸಿದ್ದರು. ಹಾಗಾಗಿ ಅವರು ಬಾಹ್ಯ ತೀರ್ಥಕ್ಷೇತ್ರಗಳ ಪರಟನೆಯನ್ನು ನಿರಾಕರಿಸಿದರು. ಅವರ ದೃಷ್ಟಿಯಲ್ಲಿ ಶರಣನಿದ್ದ ಸ್ಥಳವೇ ಕೈಲಾಸ, ಶಂಕರ ದಾಸಿಮಯ್ಯ ವಾರಣಾಸಿಗೆ ಹೋಗಬೇಕೆಂದು ಬಯಸಿ, ಹೋಗುವಾಗ ತನ್ನ ಇಷ್ಟದೈವವಾದ ಜೆಡೆಯ ಶಂಕರನಲ್ಲಿಗೆ ಬರುತ್ತಾನೆ. ಅಲ್ಲಿಗೆ ಬಂದಮೇಲೆ ಅಲ್ಲಿಯೇ ಲಿಂಗಧ್ಯಾನದಲ್ಲಿ ಕಳೆಯುತ್ತಾನೆ. ಆಗಿನ ಅವನ ಇಷ್ಟದೈವದ ನಿಷ್ಠೆ, ಅನ್ಯದೈವ ಮತ್ತು ಅನ್ಯ ಸ್ಥಳಗಳನ್ನು ಕಡೆಗಣಿಸಿಬಿಡುತ್ತದೆ. ಇದೇ ದೃಷ್ಟಿ ಬಸವರಾಜದೇವರ ರಗಳೆಯಲ್ಲೂ ವ್ಯಕ್ತವಾಗುತ್ತದೆ. ಅಲ್ಲಿ ಬಸವರಾಜ ತನ್ನನ್ನು ಕೈಲಾಸಕ್ಕೆ ಕೊಂಡೊಯ್ಯಲು ಪುಷ್ಪಕವು ಬಂದಿರಲು;

***"ಶರಣರೊಕ್ಕುದರ ಸವಿ ಕೈಲಾಸದೊಳಗುಂಟೆ***
***ಶರಣಸಂಗದ ಸುಖಂ ಕೈಲಾಸದೊಳಗುಂಟೆ"[9]***

ಎಂದು ನುಡಿಯುತ್ತಾನೆ.

"ಹರಿಹರನು ಪುರಾತನ ನೂತನ ರಗಳೆಗಳಲ್ಲಿ ಕಂಡರಿಸಿದ ಭಕ್ತಿಪಥ ಏಕಮುಖವಾದುದಲ್ಲವೆಂಬುದಕ್ಕೆ ಇಲ್ಲಿನ ಸಮಾಲೋಚನೆ ನಿದರ್ಶನವಾಗಿದೆ. ಕಾಲ, ಪರಿಸರಗಳಲ್ಲಿ ಜೀವನ ವಿಕಾಸಗೊಳ್ಳುತ್ತದೆ. ಮೊದ ಮೊದಲು ಭಾವುಕತೆಯಿಂದ ಕೂಡಿದುದು ಕೊನೆಗೆ ವಿವೇಕ ಸಂಯಮಗಳ ಬೆಳಕಿನಲ್ಲಿ ಪ್ರಜ್ವಲಿಸುತ್ತದೆ. ಆದರೂ ಭಕ್ತನ ಬಾಳು ಶ್ರದ್ಧೆಯನ್ನು ಬಿಟ್ಟು ನಿಲ್ಲುವುದಿಲ್ಲ. ಆದರೆ ಆ ಶ್ರದ್ಧೆಯೊಂದೆ ಅವರ ಪರಮಗಂತವ್ಯವಲ್ಲ."[10] ಆ ಶ್ರದ್ಧೆ ಯಾವುದೆಂಬುದನ್ನ ಅರಿಯುವ ಮನಸ್ಸು ಬೇಕು. ಅದನ್ನಾಚರಿಸುವ ಕ್ರಿಯೆಯಲ್ಲಿ ಜ್ಞಾನ ಬೇಕು. ಈ ಜ್ಞಾನ–ಕ್ರಿಯಾಸಮನ್ವಿತವಾದುದೇ ಪರಿಪೂರ್ಣ ಭಕ್ತಿ, ಹರಿಹರನ ರಗಳೆಗಳಲ್ಲಿ ಇವೆರಡರ ಅನುಸಂದಾನವಿದೆ. ಇದೇ ಹರಿಹರನ ಭಕ್ತಿ ವೈಶಿಷ್ಟ್ಯ.

**ಅಡಿಟಿಪ್ಪಣಿ**


1. ಆರ್. ಸಿ. ಹಿರೇಮಠ, ಮಹಾಕವಿ ಪಂಪೆಯ ಹರಿಹರ ದೇವಕೃತ ಪುರಾತನರ ರಗಳೆಗಳು ಪು.53.
2. ಆರ್. ಸಿ. ಹಿರೇಮಠ, ಮಹಾಕವಿ ಹಂಪಯ ಹಂಪರ ದೇವಕೃತ ಪುರಾತನರ ರಗಳೆಗಳು ಪು.374.
3. ತರಳಬಾಳು, ಸಂಪುಟ–3, ಸಂಚಿಕೆ–4, ಜುಲೈ–1978, ಪುಟ. 50–51.
4. ಆರ್. ಸಿ. ಹಿರೇಮಠ. ಮಹಾಕವಿ ಹಂಪೆಯ ಹರಿಹರ ದೇವಕೃತ ಪುರಾತನರ ರಗಳೆಗಳು, ಪುಟ.24.
5. ಎಂ. ಎಸ್. ಸುಂಕಾಪುರ. ಮಹಾಕವಿ ಹರಿಹರ ದೇವಕೃತ ನೂತನ ಪುರಾತನರ ರಗಳೆಗಳು. ಪು.14.

6. ಎಂ. ಎಸ್. ಸುಂಕಾಪುರ. ಮಹಾಕವಿ ಹರಿಹರ ದೇವಕೃತ ನೂರ್ತ ಪುರಾತನರ ರಗಳೆಗಳು, ಪು.40.
7. ಎಂ. ಎಸ್. ಸುಂಕಾಪುರ. ಮಹಾಕವಿ ಹರಿಹರ ದೇವಕೃತ ಶಿವಭಕ್ತಿ ಮಹಿಮಾ ರಗಳೆಗಳು. ಪು.229.
8. ಟಿ. ಎಸ್. ವೆಂಕಣ್ಣಯ್ಯ. ಹರಿಹರ ಕವಿಯ ಬಸವರಾಜ ದೇವರ ರಗಳೆ, ಪುಟ.50.
9. ಟಿ. ಎಸ್. ವೆಂಕಣ್ಣಯ್ಯ. ಹರಿಹರ ಕವಿಯ ಬಸವರಾಜ ದೇವರ ರಗಳೆ, ಪುಟ.87.
10. ತರಳಬಾಳು, ಸಂಪುಟ–1 ಸಂಚಿಕೆ–4 ಜನವರಿ–1978, ಪುಟ.58.

**ಪರಾಮರ್ಶನ ಗ್ರಂಥಗಳು**


- ಹಿರೇಮಠ. ಆರ್.ಸಿ. (2015). ಮಹಾಕವಿ ಪಂಪೆಯ ಹರಿಹರ ದೇವಕೃತ ಪುರಾತನರ ರಗಳೆಗಳು, ಕರ್ನಾಟಕ ವಿವಿ. ಧಾರವಾಡ.
- ವೆಂಕಣ್ಣಯ್ಯ. ಟಿ.ಎಸ್. (1938). ಹರಿಹರ ಕವಿಯ ಬಸವರಾಜ ದೇವರ ರಗಳೆ, ವೆಸ್ಲೆ ಪ್ರೆಸ್.